MYSORE LEGISLATIVE ASSEMBLY

FIRST DAY

Monday, 11th October 1954.

The House met in the Legislative Assembly Hall, Old Public Offices, Bangalore, at Twelve of the Clock.

MR. DEPUTY SPEAKER (SRI R. CHENNIGARAMIAH) in the Chair.

MEMBERS SWORN.

Name	*Constituency*
Sri G. S. Bomme Gowda	Mandya
Sri H. M. Channabasappa, B.A., LL.B.	Periyapatna

SECRETARY'S REPORT

SECRETARY.—Sir, I beg to lay on the table a statement showing the Acts which have received the assent of His Highness the *Rajpramukh* or the *President* subsequent to the previous report made during the last session.

QUESTIONS AND ANSWERS

Government Servants (Lists of Properties)

Q.—1. SRI S. KARIAPPA (Virupakshapura).—

Will the Government be pleased to state :—

(*a*) whether they have taken the lists of properties owned by persons in Government service ;

(*b*) when this system of taking lists of properties owned by Government servants was first commenced ;

(*c*) whether this practice is still continuing ?

A.—SRI K. HANUMANTHAIYA (Chief Minister).—

(*a*) Yes.
(*b*) About the year 1915.
(*c*) Yes.

ಶ್ರೀ ಎಸ್. ಕರಿಯಪ್ಪ.—ಸರ್ಕಾರಿ ನೌಕರಿಯಲ್ಲಿರ ತಕ್ಕವರ ಆಸ್ತಿಪಾಸ್ತಿಗಳ ಪಟ್ಟಿಯನ್ನು ಯಾವ ಉದ್ದೇಶದಿಂದ ತೆಗೆದುಕೊಳ್ಳುತ್ತಿದ್ದೀರಿ ?

ಶ್ರೀ ಕೆ. ಹನುಮಂತಯ್ಯ.—ಎಷ್ಟೆಷ್ಟು ಆಸ್ತಿ ನಂಪಾದಿಸಿದ್ದಾರೆಂಬುದನ್ನು ನೋಡೋಣ ಎಂಬ ಉದ್ದೇಶದಿಂದ.

ಶ್ರೀ ಎಸ್. ಕರಿಯಪ್ಪ.—ನೌಕರಿಗೆ ಸೇರಿದ ಲಾಗಾಯ್ತು ಅವರ ಆಸ್ತಿಪಾಸ್ತಿ ಹೆಚ್ಚಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಅಳತೆಮಾಡಿ ತಿಳಿದು ಕೊಳ್ಳುವುದಕ್ಕಾಗಿ ಅಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಹೌದು.

ಶ್ರೀ ಎಸ್. ಕರಿಯಪ್ಪ.—ಹಾಗೆ ಪಟ್ಟಿ ತಯಾರಿಸಿ ಕೆಲವು ವರ್ಷಗಳಾದಮೇಲೆ ಅವರ ಆಸ್ತಿ ಹೆಚ್ಚಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಿದ್ದೀರಾ ?

ಶ್ರೀ ಕೆ. ಹನುಮಂತಯ್ಯ.—ಅದು ಪರಿಶೀಲನೆಯಲ್ಲಿ ಇದ್ದೇ ಇರುತ್ತದೆ.

ಶ್ರೀ ಎಸ್. ಕರಿಯಪ್ಪ.—ಹಾಗೆ ಪರಿಶೀಲನೆ ನಡೆಸಿರುವುದರಲ್ಲಿ ತಿಂಗಳಿಗೆ ಸಾವಿರ ರೂಪಾಯಿಗಳಮೇಲೆ ನಂಬಳ ಪಡೆಯುತ್ತಿರುವವರ cases ಎಷ್ಟು ಗಮನಕ್ಕೆ ಬಂದಿವೆ?

ಶ್ರೀ ಕೆ. ಹನುಮಂತಯ್ಯ.—ಸಾವಿರ ರೂಪಾಯಿಗಳ ಮೇಲೆ ನಂಬಳ ಪಡೆಯುತ್ತಿರುವವರ ವಿಚಾರದಲ್ಲಿ ಇದುವರೆಗೆ ಅನುಮಾನಪಟ್ಟಿಲ್ಲ. ಆ ರೀತಿ ಅನುಮಾನ ಪಡತಕ್ಕ ಪ್ರಸಂಗ ಕಂಡು ಬಂದರೆ ಪರಿಶೀಲನುತ್ತೇವೆ.

ಶ್ರೀ ಎಸ್. ಕರಿಯಪ್ಪ.—ತಿಂಗಳಿಗೆ ಐನೂರು ರೂಪಾಯಿಗಳಮೇಲೆ ನಂಬಳ ಪಡೆಯುತ್ತಿರುವವರ ವಿಚಾರದಲ್ಲಿ ಏನಾದರೂ ಈ ರೀತಿ ಪರಿಶೀಲನೆ ನಡೆಸಿದ್ದೀರಾ ?

ಶ್ರೀ ಕೆ. ಹನುಮಂತಯ್ಯ.—ನಡೆಸಿದೆ.

ಶ್ರೀ ಎಸ್. ಕರಿಯಪ್ಪ.—ಅಂಥ cases ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಕೆ. ಹನುಮಂತಯ್ಯ.—ಒಂದು case ಮಾತ್ರ ಗಮನಕ್ಕೆ ಬಂದಿದೆ. ಅವರಿಂದ ಈ ವಿಚಾರದಲ್ಲಿ ವಿವರಣೆ ಕೇಳಿದೆ.

ಶ್ರೀ ಎಸ್. ಕರಿಯಪ್ಪ.—ಅವರಿಗಿರತಕ್ಕ ಆಸ್ತಿ ಪಾಸ್ತಿಗಳನ್ನು ಹೆಂಡತಿ, ಮಕ್ಕಳ ಹೆಸರಿಗೆ ಮಾಡಿಬಿಟ್ಟಿದ್ದಾರೆ. ಅಂಥ ಸಂದರ್ಭದಲ್ಲಿ ಯಾವರೀತಿ ಪರಿಶೀಲನೆ ನಡೆಸುತ್ತೀರಿ ?

ಶ್ರೀ ಕೆ. ಹನುಮಂತಯ್ಯ.—ಅಂಥ ಸಂದರ್ಭಗಳಿದ್ದರೆ ಕಂಡುಹಿಡಿಯುವುದು ಕಷ್ಟ. ಆದರೂ ಅನುಮಾನ ಕಂಡುಬಂದರೆ ಅನುಮಾನದ ಪ್ರಸಂಗಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆ.

Sri V. M. MASCARENHAS.—As a result of the enquiry which the Government are supposed to be carrying on from year to year, may I know from how many officers the Government have recovered property they have acquired by improper means ?

Sri K. HANUMANTHAIYA.—All have not acquired property by improper means. I have already answered the question that in respect of those cases where it is proved to the satisfaction of the Government that such malpractices have taken place, Government will take action.

Sri V. M. MASCARENHAS.—I would like to know in how many cases the Government have taken action like that?

Sri K. HANUMANTHAIYA.—Not that I am aware of.

Sri V. M. MASCARENHAS.—Are all our officers absolutely honest ?

Sri K. HANUMANTHAIYA.—As my Hon'ble friend knows, we have to presume everybody to be innocent unless proved to be guilty. We cannot proceed on the assumption that everybody is guilty.

Sri V. M. MASCARENHAS.—May I inform the Government that this practice does not serve any useful purpose and may be discontinued ; or make the enquiry more frequent so that it may serve its useful purpose ?

Sri K. HANUMANTHAIYA.—The Hon'ble Member has put a double question. Nevertheless I will answer. Government is not in the know, as he says, that this method is useless. Government is of the opinion that the existence of this method has a very salutary effect on the officers. And if and when specific cases arise, we can certainly take action.

ಶ್ರೀ ಡಿ. ದೇವರಾಜ ಅರಸ್.—ನರ್ಕಾರಿ ಅಧಿಕಾರಿಗಳು ಕೆಲಸಕ್ಕೆ ಸೇರುವುದಕ್ಕೆ ಮುಂಚೆ ಅವರ ಆಸ್ತಿಪಾಸ್ತಿಗಳ ಬಗ್ಗೆ ಲೆಕ್ಕಾಚಾರ ಇಟ್ಟುಕೊಳ್ಳುವುದಕ್ಕೆ ನರ್ಕಾರದಲ್ಲಿ ಏರ್ಪಾಡು ಮಾಡಿದ್ದೀರಾ ?

ಶ್ರೀ ಕೆ. ಹನುಮಂತಯ್ಯ.—ಇದಕ್ಕೆಲ್ಲಾ ರೂಲ್ಸ್ ಇವೆ. ಅವಕ್ಕೆ ಅನುನಾರವಾಗಿ ನಡೆಸುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ನರ್ಕಾರಿ ಅಧಿಕಾರಿ ಎನ್ನಿಸಿಕೊಳ್ಳುವವನ ವಿಚಾರದಲ್ಲಿ ಆತನು ಕೆಲಸಕ್ಕೆ ಸೇರುವುದಕ್ಕೆ ಪೂರ್ವಭಾವಿಯಾಗಿ initial stageನಲ್ಲಿ ಆತನ ಕುಟುಂಬ ವರ್ಗಕ್ಕೆ ಸೇರಿದ ಆಸ್ತಿಪಾಸ್ತಿ ಏನಿತ್ತು ಎಂಬುದು ಗೊತ್ತಾದರೆ ತಾನೇ, ಆತನು ಕೆಲಸಕ್ಕೆ ಸೇರಿದಮೇಲೆ ಹೆಚ್ಚಿಗೆ ಮಾಡಿಕೊಂಡಿರುವುದು ಗೊತ್ತಾಗುವುದು ?

ಶ್ರೀ ಕೆ. ಹನುಮಂತಯ್ಯ.—ನನ್ನ ಉತ್ತರದಲ್ಲಿ ಅದೇ ಅರ್ಥ ಅಡಕವಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಹಾಗೆ ಕಡ್ಡಾಯವಾಗಿ ನಂಪ್ರದಾಯ ನಡೆದುಕೊಂಡು ಬರುತ್ತಿದೆಯೇ ?

ಶ್ರೀ ಕೆ. ಹನುಮಂತಯ್ಯ.—ನನಗೆ ತಿಳಿದಮಟ್ಟಿಗೆ ನಡೆದುಕೊಂಡು ಬರುತ್ತಿದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಅಧಿಕಾರಿಗಳಿಗೆ charitable purposesಗಾಗಿ ಫಂಡು ವನೂಲು ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದೀರಾ ?

ಶ್ರೀ ಕೆ. ಹನುಮಂತಯ್ಯ.—ಇದರಲ್ಲಿ ನರ್ಕಾರ ಅಧಿಕಾರ ಕೊಡುವ ಪ್ರಶ್ನೆಯೇ ಇಲ್ಲ. ಯಾವುದಾದರೂ ಒಳ್ಳೆಯ ಕೆಲನಕ್ಕೆ ಆ ನ್ಥಳದಲ್ಲರತಕ್ಕಂಥ ಪ್ರಮುಖರೂ ನರ್ಕಾರಿ ಅಧಿಕಾರಿಗಳೂ ನಹಕರಿಸಿ charitable purposesಗಾಗಿ ಫಂಡ್ ಎತ್ತತಕ್ಕ ಪದ್ಧತಿಯಿದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಈ ರೀತಿ ನಾವಿರಾರು ರೂಪಾಯಿಗಳು ವನೂಲು ಮಾಡಿ ದುರುಪಯೋಗಪಡಿಸಿಕೊಂಡಿರುವುದು ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಹನುಮಂತಯ್ಯ.—ಆ ವಿಷಯ ತಾವು ತಿಳಿನಬೇಕು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅಧಿಕಾರಿಗಳ ಆಸ್ತಿಪಾಸ್ತಿಗಳನ್ನು ತನಿಖೆ ಮಾಡತಕ್ಕ ಅಧಿಕಾರಿ ಯಾರು ? ಉದಾಹರಣೆಗೆ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಇದನ್ನು ತನಿಖೆ ಮಾಡತಕ್ಕವರು ಯಾರು ?

ಶ್ರೀ ಕೆ. ಹನುಮಂತಯ್ಯ.—ಆ ಇಲಾಖೆಯ ಅಧಿಕಾರಿ ವರ್ಗದವರು—ಇಲಾಖೆಯ ಮುಖ್ಯಾಧಿಕಾರಿಗಳು ಮತ್ತು ಚೀಫ್ ಇಂಜಿನಿಯರು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಚೀಫ್ ಇಂಜಿನಿಯರ ವಿಚಾರದಲ್ಲಿ ತನಿಖೆ ನಡೆಸುವವರು ಯಾರು ?

ಶ್ರೀ ಕೆ. ಹನುಮಂತಯ್ಯ.—ನರ್ಕಾರದವರು.

ಶ್ರೀ ಎಚ್. ಎಂ. ಚನ್ನಬನಪ್ಪ.—ನರ್ಕಾರಿ ಅಧಿಕಾರಿಗಳಿಗಿರತಕ್ಕ ಆಸ್ತಿಪಾಸ್ತಿಗಳ ಪಟ್ಟಿಯನ್ನು ತೋರಿನುವ ಒಂದು ರಿಜಿನ್ಟರ್ ಏನಾದರೂ ಇಟ್ಟಿದ್ದೀರಾ ?

Mr. DEPUTY SPEAKER.—That question has been put by Sri Devaraj Urs already.

Sri H. M. CHANNABASAPPA.—I would like to know whether a Register has been maintained.

ಶ್ರೀ ಕೆ. ಹನುಮಂತಯ್ಯ.—ರೆಕಾರ್ಡ್ ಇರುತ್ತದೆ. What is meant by record and what is meant by register is a matter of interpretation. Records are being maintained.

ಶ್ರೀ ಎಚ್. ಎಂ. ಚನ್ನಬನಪ್ಪ.—ಆಸ್ತಿ ಹೆಚ್ಚಿದ್ದರ ಮತ್ತು ಕಮ್ಮಿ ಆದದ್ದರ ಬಗ್ಗೆ ಎಷ್ಟು ಕಾಲಕ್ಕೆ ಒಂದು ನಾರಿ ಪರಿಶೀಲನೆ ಮಾಡುತ್ತೀರಿ ?

Sri K. HANUMANTHAIYA.—I do not remember off-hand. I think periodically it is being verified.

ಶ್ರೀ ಎನ್. ಗೋಪಾಲಗೌಡ.—ನಾಮಾನ್ಯವಾಗಿ ನರ್ಕಾರಿ ಅಧಿಕಾರಿಗಳ ಆಸ್ತಿಪಾಸ್ತಿಗಳೆಷ್ಟಿವೆ ಎಂಬ ಬಗ್ಗೆ ಅಧಿಕಾರಿಗಳು ತಾವು ತಾವಾಗಿಯೇ ಪರಿಶೀಲನೆ ಮಾಡುತ್ತಾರೆಯೇ ಅಥವಾ ಯಾರಾದರೂ ದೂರು ಕೊಟ್ಟಮೇಲೆ ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಕೆ. ಹನುಮಂತಯ್ಯ.—ತಾವಾಗಿ ತಾವೇ ಪರಿಶೀಲನೆ ಮಾಡಬೇಕು. ದೂರು ಕೊಟ್ಟಿದ್ದನ್ನು ಕೂಡ ಪರೀಕ್ಷೀಲನೆ ಮಾಡುತ್ತಾರೆ. ಈ ಎರಡು ಮಾರ್ಗಗಳನ್ನೂ ಅನುಸರಿಸಬಹುದು.

ಶ್ರೀ ಎಸ್. ಗೋಪಾಲಗೌಡ.—ಹೀಗೆ ಪರಿಶೀಲನೆ ಮಾಡಿದ್ದರಲ್ಲಿ ಇತ್ತೀಚೆಗೆ ಫಾರೆಸ್ಟ್ ಡಿಪಾರ್ಟ್‌ಮೆಂಟು ಅಥವಾ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನ ಎಷ್ಟು ಜನರು ತಮ್ಮ ಆದಾಯಕ್ಕಿಂತ ಹೆಚ್ಚು ಮಟ್ಟದ ಜೀವನ ಮಾಡುತ್ತಾ ಇದ್ದಾರೆ ಎಂಬುದನ್ನು ಕಂಡು ಹಿಡಿದಿದ್ದಾರೆಯೇ ?

ಶ್ರೀ ಕೆ. ಹನುಮಂತಯ್ಯ.—ಇನ್ನೂ ಕಂಡು ಹಿಡಿದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ಈಗ ಪ್ರಸ್ತುತ ತನಿಖೆ ನಡೆಯುತ್ತಾ ಇದೆಯೇ ?

ಶ್ರೀ ಕೆ. ಹನುಮಂತಯ್ಯ.—ನಡೆಯುತ್ತಾ ಇದೆ.

ಶ್ರೀ ಎಸ್. ಗೋಪಾಲಗೌಡ.—ತನಿಖೆ ನಡೆದೂ ಕೂಡ ಅಂಥ ಸಂದರ್ಭ ಯಾವುದೂ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಇಲ್ಲ. ಯಾವುದಾದರೂ ಒಂದು ಸಂದರ್ಭದಲ್ಲಿ ಇಂಥ ಅಧಿಕಾರಿ ಹೀಗೆ ಮಾಡಿದ್ದಾನೆ ಎಂಬುದು ಕಂಡುಬಂದಾಗ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಯೇ ಹೊರತು ಅನುಮಾನಕ್ಕೆ ಆಸ್ಪದವಿಲ್ಲದೇ ಇದ್ದರೆ ಕಾರ್ಯಕ್ರಮ ತೆಗೆದುಕೊಳ್ಳಲು ಅವಕಾಶವಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈ ಕಾನೂನು ಮಂತ್ರಿಗಳಿಗೂ ಮತ್ತು ಸರ್ಕಾರದಿಂದ ಸಂಭಾವನೆ ಪಡೆಯತಕ್ಕ ಇತರ ಜನರಿಗೂ ಅನ್ವಯಿಸುತ್ತದೆಯೇ ?

ಶ್ರೀ ಕೆ. ಹನುಮಂತಯ್ಯ.—ಈಗ ಅನ್ವಯಿಸುತ್ತಾ ಇಲ್ಲ; ನಾನಾದರೂ ಆ ರೀತಿ ಅನ್ವಯಿಸುವುದು ಒಳ್ಳೆಯದು ಎಂದು ಒಪ್ಪಿಕೊಳ್ಳುತ್ತೇನೆ.

Sri R. ANANTARAMAN.—Is there a rule that the officials will have to file an affidavit declaring their properties at the time of assuming office ?

Sri K. HANUMANTHAIYA.—I do not know whether they have filed the affidavit or not. I am not conversant with the details.

Bellary District (Revenue and expenditure).

Q—17. **Sri K. LAKKAPPA** (Channarayapatna).—

Will the Government be pleased to state :—

(*a*) what is the revenue anticipated by the Government from Bellary District for the year 1954-55 ;

(*b*) what is the expenditure envisaged for the same year ;

(*c*) whether any deficit is anticipated ; if so, how much ?

A.— **Sri K. HANUMANTHAIYA** (Chief Minister).—

(*a*) About Rs. 92 lakhs.

(*b*) Expenditure on Revenue account is about Rs. 133 lakhs, and on Capital account Rs. 83 lakhs.

(*c*) The estimated Revenue deficit is about Rs. 41 lakhs. The exact figure will be known after the basis of allocation of Public Debt is finalised.

ಶ್ರೀ ಕೆ. ಲಕ್ಕಪ್ಪ.—ಈ ಪಬ್ಲಿಕ್ ಡೆಟ್ಸ್ ಸಂಬಂಧವಾಗಿ ನಮ್ಮ ಮೈಸೂರು ಸರ್ಕಾರ, ಹೈದರಾಬಾದು ಸರ್ಕಾರ ಮತ್ತು ಆಂಧ್ರ ಸರ್ಕಾರದವರೊಡನೆ ಪರಸ್ಪರ ಮಾತುಕತೆ ನಡೆಯಬೆಯೇ ?

ಶ್ರೀ ಕೆ. ಹನುಮಂತಯ್ಯ.—ಮಾತುಕತೆ ನಡೆಯುವುದಕ್ಕೆ ಪ್ರಾರಂಭವಾಗಿದೆ. ಏಕೆಂದರೆ ಈ ವಿಷಯಗಳನ್ನೆಲ್ಲಾ ಮೊದಲು ಅಕೌಂಟೆಂಟ್ ಜನರಲ್‌ರವರು ಫೈನಲೈಸ್ ಮಾಡಬೇಕು. ಈಗ ಮದರಾಸ್ ಅಕೌಂಟೆಂಟ್ ಜನರಲ್‌ರವರು ಈ ವಿಷಯದಲ್ಲಿ ಒಂದು ರಿಪೋರ್ಟ್ ಸಿದ್ಧಮಾಡಿದ್ದಾರೆ. ಇನ್ನುಮೇಲೆ ಮಾತುಕತೆ ಆ ಆಧಾರದ ಮೇಲೆ ನಡೆಯುತ್ತದೆ.

ಶ್ರೀ ಕೆ. ಲಕ್ಕಪ್ಪ.—ಈ ಪಬ್ಲಿಕ್ ಡೆಟ್ಸ್ ನಮ್ಮ ಮೇಲೆ ಎಷ್ಟು ಬೀಳಬಹುದು ಎಂಬುದನ್ನು ಅಪ್ರಾಕ್ಸಿಮೇಟ್ ಆಗಿ ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಕೆ. ಹನುಮಂತಯ್ಯ.—ಅಪ್ರಾಕ್ಸಿಮೇಟ್ ಆಗಿ ಹೇಳುವುದಕ್ಕೆ ಸಾಧ್ಯ. ಈಗ ತಾವು ಬಜೆಟ್ ನೋಡಿದರೆ ಗೊತ್ತಾಗುತ್ತದೆ. ಅದರಲ್ಲಿ 20 ಲಕ್ಷ ರೂಪಾಯಿಗಳನ್ನು ಬಡ್ಡಿ ಕೊಡುವುದಕ್ಕಾಗಿ ತೆಗೆದಿದ್ದೇವೆ. ಅದರಿಂದ ಸ್ವಲ್ಪ ಹೆಚ್ಚು ಕಮ್ಮಿ ಸಾಲದ ಪ್ರಮಾಣ ಎಷ್ಟು ಎಂಬುದು ಲೆಕ್ಕ ಹಾಕಿದರೆ ಗೊತ್ತಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ತುಂಗಭದ್ರಾ ಅಣೆಕಟ್ಟಿನ ಸಂಬಂಧವಾಗಿ ಮೈಸೂರು ಸರ್ಕಾರದವರು ಏನಾದರೂ ಖರ್ಚು ಕೊಡಬೇಕಾದ ಸಂದರ್ಭವಿದೆಯೇ ?

ಶ್ರೀ ಕೆ. ಹನುಮಂತಯ್ಯ.—ಹೌದು; ಖರ್ಚಾಗುವುದರಲ್ಲಿ ಮೈಸೂರು ಸರ್ಕಾರದವರೂ ಕೊಡಬೇಕಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಎಷ್ಟು ಎಂಬುದನ್ನು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಕೆ. ಹನುಮಂತಯ್ಯ.—ಈ ವರ್ಷ 49¼ ಲಕ್ಷ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಕಾಣಿಸಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ 49¼ ಲಕ್ಷ ರೂಪಾಯಿಗಳನ್ನಲ್ಲದೆ ಬಡ್ಡಿಯನ್ನೂ ಕೊಡಬೇಕಾಗುತ್ತದೆಯಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಕೊಡಬೇಕು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಒಟ್ಟು ಸಾಲ ಹೊರಿಸುವುದಕ್ಕೆ ಹಣ ಕೊಡಬೇಕಾಗುವುದು ಎಷ್ಟು ?

ಶ್ರೀ ಕೆ. ಹನುಮಂತಯ್ಯ.—ಉದ್ದೇಶಪೂರ್ವಕವಾಗಿ ಆ ಮೊಬಲಗನ್ನು ನಾನು ಹೇಳಲಿಲ್ಲ. ಆಂಧ್ರ ಸರ್ಕಾರದವರೊಡನೆ ಕಾರ್ಫರೆನ್ಸ್ ಆದಮೇಲೆ ಈ ಮೊಬಲಗಿನಲ್ಲಿ ರೆವಿನ್ಯೂ ಇಂದ ಎಷ್ಟು, ತುಂಗಭದ್ರಾ ಅಣೆಕಟ್ಟು ಕಟ್ಟಿಸುವುದಕ್ಕೆ ಎಷ್ಟು ಖರ್ಚಾಗಿದೆ ಎಂದರೆ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಎಷ್ಟು ಎಂಬುದನ್ನು ವಿಂಗಡಿಸಿ ನಮಗೆ ಎಷ್ಟು ಸಾಲ ಉಳಿಯುತ್ತದೆ ಎಂಬ ನಿರ್ಧಾರಕ್ಕೆ ಬಂದಿದೆ. ಆದ್ದರಿಂದ ಈ ದಿವಸವೇ ತುಂಗಭದ್ರಾ ಯೋಜನೆಗೆ ಇಷ್ಟು ಖರ್ಚಾಗಿ ನಾವು ಇಷ್ಟು ಸಾಲ ಕೊಡಬೇಕು ಎಂಬುದನ್ನು ನಿಗದಿಯಾಗಿ ಹೇಳುವುದಕ್ಕೆ ಸಾಧ್ಯವಿಲ್ಲ.